Gen

**ಕರ್ನಾಟಕ ಸರ್ಕಾರ**

**ಸಂಖ್ಯೆ:ಸಿಆಸುಇ:111:ಆರ್.ಟಿ.ಐ.:2015**

**ಕರ್ನಾಟಕ ಸರ್ಕಾರದ ಸಚಿವಾಲಯ,**
**ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಜನಸ್ಪಂದನ)**
**3ನೇ ಮಹಡಿ, ಪೋಡಿಯಂ ಬ್ಲಾಕ್,**
**ವಿಶ್ವೇಶ್ವರಯ್ಯ ಮುಖ್ಯ ಗೋಪುರ,**
**ಬೆಂಗಳೂರು, ದಿನಾಂಕ: 05.08.2015.**

# ಸುತ್ತೋಲೆ

ವಿಷಯ: ಮಾಹಿತಿ ಹಕ್ಕು ಅಧಿನಿಯಮ, 2005ರ ಪ್ರಕರಣ 6(3), 7(3), 7(6) ಮಾಹಿತಿ ಕೋರಿಕೆ ಮನವಿಗಳ ಹಾಗೂ 19(1)ರಡಿ ಮೊದಲ ಮೇಲ್ಮನವಿಗಳ ನಿರ್ವಹಣೆ ಬಗ್ಗೆ

---0---

ಮಾಹಿತಿ ಹಕ್ಕು ಅಧಿನಿಯಮ, 2005ರ ಸಂಪೂರ್ಣ ಅನುಷ್ಠಾನ ಮತ್ತು ಬಲವರ್ಧನೆಗಾಗಿ ಕರ್ನಾಟಕ ಮಾಹಿತಿ ಆಯೋಗವು 2013-14ನೇ ಸಾಲಿನಲ್ಲಿ ಮಾಡಿರುವ ಶಿಫಾರಸ್ಸುಗಳನ್ವಯ ಮಾಹಿತಿ ಹಕ್ಕು ಅಧಿನಿಯಮ, 2005ರ ಪ್ರಕರಣ 6(3), 7(3), 7(6) ಮಾಹಿತಿ ಕೋರಿಕೆ ಮನವಿಗಳ ಹಾಗೂ 19(1)ರಡಿ ಮೊದಲ ಮೇಲ್ಮನವಿಗಳ ನಿರ್ವಹಣೆ ಬಗ್ಗೆ ಕೆಳಕಂಡ ಸೂಚನೆಗಳನ್ನು ಪಾಲಿಸುವಂತೆ ಸೂಚಿಸಿದೆ.

1. ಯಾವುದೇ ಅರ್ಜಿಗಳನ್ನು ಕಲಂ 6(3)(ii)ರ ಮೇರೆಗೆ ವರ್ಗಾವಣೆ ಮಾಡಿದಾಗ, ಅರ್ಜಿದಾರನಿಗೆ ವರ್ಗಾವಣೆ ಮಾಡಿದರ ಬಗ್ಗೆ ಮಾಹಿತಿ ನೀಡುವುದರ ಜೊತೆಗೆ, ಇದರ ಒಂದು ಪ್ರತಿಯನ್ನು ಮೊದಲನೇ ಮೇಲ್ಮನವಿ ಪ್ರಾಧಿಕಾರಕ್ಕೆ ಸಹ ಕಳುಹಿಸಿಕೊಡುವುದು. ಅರ್ಜಿದಾರನು ತನಗೆ ಮಾಹಿತಿ ದೊರೆತಿಲ್ಲವೆಂದು ಪ್ರಥಮ ಮೇಲ್ಮನವಿ ಪ್ರಾಧಿಕಾರಕ್ಕೆ ಯಾವುದೇ ಅಪೀಲನ್ನು ಸಲ್ಲಿಸಿದ್ದಲ್ಲಿ, ಅರ್ಜಿದಾರನ ಗಮನಕ್ಕೆ ತರುತ್ತಾ ಸದರಿ ಮೇಲ್ಮನವಿಯನ್ನು ಸಂಬಂಧಪಟ್ಟ ಪ್ರಥಮ ಮೇಲ್ಮನವಿ ಪ್ರಾಧಿಕಾರಕ್ಕೆ ವರ್ಗಾಯಿಸುವುದು.

2. ಕಲಂ 6(3)ರ ಮೇರೆಗೆ ಅರ್ಜಿಯನ್ನು ವರ್ಗಾವಣೆ ಮಾಡಿರುವ ಬಗ್ಗೆ ಆಯೋಗಕ್ಕೆ ಯಾವುದೇ ಮಾಹಿತಿ ಇಲ್ಲದಿರುವ ಹಿನ್ನೆಲೆಯಲ್ಲಿ ಆಯೋಗವು ಮೇಲ್ಮನವಿಗಳ/ ದೂರುಗಳ ವಿಚಾರಣೆಯ ವಿಷಯದಲ್ಲಿ ನೀಡಿದ ನೋಟಿಸನ್ನು, ಸಂಬಂಧಪಟ್ಟ ಸಾರ್ವಜನಿಕ ಮಾಹಿತಿ ಅಧಿಕಾರಿಗೆ ಮತ್ತು ಪ್ರಥಮ ಮೇಲ್ಮನವಿ ಪ್ರಾಧಿಕಾರಿಗೆ ವರ್ಗಾಯಿಸಿ ಆಯೋಗದ ಗಮನಕ್ಕೆ ತರುವುದು.

3. ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಕಲಂ 7(3)ರ ಉಪಬಂಧಗಳನ್ನು ಅನುಸರಿಸುವುದು ಹಾಗೂ ನಿಗದಿತ ಅವಧಿಯಲ್ಲಿ ಮಾಹಿತಿ ಒದಗಿಸಲು ವಿಳಂಬವಾದಲ್ಲಿ ಕಲಂ 7(6)ರ ಮೇರೆಗೆ ಮಾಹಿತಿಯನ್ನು ಉಚಿತವಾಗಿ ಒದಗಿಸುವುದು.

4. ಮೇಲ್ಮನವಿ ಪ್ರಾಧಿಕಾರಿಗಳು ಸಹ ಕಲಂ 19(1)ರ ಮೇರೆಗೆ ಮಾಹಿತಿಯನ್ನು ಉಚಿತವಾಗಿ ನೀಡುವಂತೆ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕು. ಇದರಿಂದಾಗಿ ಅರ್ಜಿದಾರನು ಕಲಂ 19(3)ರ ಮೇರೆಗೆ ಅನಿವಾರ್ಯವಾಗಿ ಆಯೋಗವನ್ನು ಸಂಪರ್ಕಿಸಬೇಕಾದ ಸನ್ನಿವೇಶ ಕಡಿಮೆಯಾಗುತ್ತವೆ.

2...

ಮೇಲ್ಕಂಡ ನಿರ್ದೇಶನಗಳನ್ನು ಪಾಲಿಸದೇ ಇರುವಂತಹ ಸಂದರ್ಭಗಳಲ್ಲಿ ಎಲ್ಲಾ ಸಾರ್ವಜನಿಕ ಪ್ರಾಧಿಕಾರಗಳ ಮುಖ್ಯ ಕಾರ್ಯನಿರ್ವಾಹಕರು/ ಇಲಾಖಾ ಮುಖ್ಯಸ್ಥರು/ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು, ವೆಚ್ಚವಾದ ಖರ್ಚನ್ನು ಸಂಬಂಧಪಟ್ಟ ಸಾರ್ವಜನಿಕ ಮಾಹಿತಿ ಅಧಿಕಾರಿ/ ಸಿಬ್ಬಂದಿಯಿಂದ ವಸೂಲು ಮಾಡುವುದಷ್ಟೇ ಅಲ್ಲದೆ, ಒಂದು ವೇಳೆ ಅವರು ತಪ್ಪು ಮಾಡಿರುವುದು ಕಂಡುಬಂದಲ್ಲಿ ಅಂಥವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವಂತೆ ಸೂಚಿಸಿದೆ.

(ಪರಮೇಶ್ ಪಾಂಡೆ)
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಜನಸ್ಪಂದನ)

**ಇವರಿಗೆ,**

ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು

**ಪ್ರತಿ:**

1. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಎಲ್ಲ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3. ಮುಖ್ಯ ಮಾಹಿತಿ ಆಯುಕ್ತರ ಆಪ್ತ ಸಹಾಯಕರು, ಕರ್ನಾಟಕ ಮಾಹಿತಿ ಆಯೋಗ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಆಸುಇ(ಜನಸ್ಪಂದನ), ವಿ.ವಿ.ಗೋಪುರ.
5. ಕಾರ್ಯದರ್ಶಿಗಳು, ಕರ್ನಾಟಕ ಮಾಹಿತಿ ಆಯೋಗ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

Received